## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 29.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ.ಸಿ ಎನ್ ಹೆಚ್ ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈಗ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಜನ್ಮ ದಿಃ 26/06/1985 ಆಗಿರುತ್ತದೆ. ದಾವಾ ತಯಾರು ಮಾಡುವ ಸಮಯದಲ್ಲಿ ನನ್ನ ತಾಯಿಯೇ ಮಾಹಿತಿ ಕೊಟ್ಟಿರುತ್ತಾರೆ. ನನ್ನ ತಾಯಿಯವರಿಗೆ ಹುಷಾರಿರಲ್ಲ ಎಂದರೆ ಸರಿ. ಅವರಿಗೆ paralysis ಆಗಿದೆ ಎಂದರೆ ಸರಿ. ಸದರಿಯವರಿಗೆ ಕೊರೋನಾ ಸಮಯದಿಂದಲೂ paralysis ಆಗಿದೆ. ಈ ದಾವಾ ಸಲ್ಲಿಸುವುದಕ್ಕಿಂತ ಮೊದಲು ನನ್ನ ತಾಯಿ ಬೇರೆ ದಾವಾ ಸಲ್ಲಿಸಿದ್ದರು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷಿ ಪ್ರಮಾಣಪತ್ರ ನಾನು ಹಾಕಿರುತ್ತೇನೆ ಮಾಹಿತಿ ನನ್ನ ತಾಯಿ ಕೊಟ್ಟಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಾಯಿ ಮೊದಲಿಗೆ ನಾನು ಹೇಗೆ ಪ್ರಮಾಣಪತ್ರ ಹಾಕಿರುತ್ತೇನೋ ಹಾಗೆ ಅವರು ಕೂಡ ಪ್ರಮಾಣಪತ್ರ ಹಾಕಿದ್ದರು ಎಂದರೆ ಸರಿ. ನಾನು ಪ್ರಮಾಣಪತ್ರ ಸಲ್ಲಿಸುವ ಸಮಯದಲ್ಲಿ ಈ ಕೇಸಿನಲ್ಲಿ ದಾಖಲಿಸಿರುವ ಎಲ್ಲಾ ದಾಖಲೆಗಳನ್ನು ನೋಡಿಕೊಂಡಿರುತ್ತೇನೆ ಎಂದರೆ ಸರಿ. ಈ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ಯಾರು ತೆಗೆದುಕೊಟ್ಟರು ಎಂದರೆ ಸಾಕ್ಷಿ ನನ್ನ ತಾಯಿಯೇ ತೆಗೆಸಿದ್ದರು ಎನ್ನುತ್ತಾರೆ. ಅಸಲು ದಾವಾ ನಂ.309/1988 ನ್ನು ನನ್ನ ತಾಯಿ ಮತ್ತು ಅವರ ಅಣ್ಣಂದಿರು ಮತ್ತು ಅವರ ತಂದೆಯ ನಡುವೆ ದಾಖಲಿಸಲಾಗಿತ್ತು ಎಂದರೆ ಸಾಕ್ಷಿ ನಾನು ಆ ಸಮಯದಲ್ಲಿ ಸಣ್ಣವನಿದ್ದೆ ಆ ಕಾರಣಕ್ಕೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹಾಗಾದರೆ ನಿಮ್ಮ

ಪ್ರಮಾಣಪತ್ರದ ಖಂಡಿಕೆ ನಂ.6 ರಲ್ಲಿ ಆ ದಾವಾದ ಬಗ್ಗೆ ಹೇಗೆ ಹೇಳಿದಿರಿ ಎಂದರೆ ಸಾಕ್ಷಿ ಒಟ್ಟಿನಲ್ಲಿ ಆ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎನ್ನುತ್ತಾರೆ. ಸದರಿ ದಾವಾದಲ್ಲಿ ಒಂದು ಆಸ್ತಿ ಬಗ್ಗೆ ನಡೆದಿದೆ ಎಂದು ಹೇಳಿದ್ದು ಆ ಆಸ್ತಿ ಯಾವುದು ಎಂದರೆ ಸಾಕ್ಷಿ 197 ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ.197 ರ ಆಸ್ತಿ ಎಷ್ಟು ಅಳತೆ ಇದೆ ಎಂದರೆ ಸಾಕ್ಷಿ ಅದರ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ಸರ್ವೆ ನಂ.197 ದಾವಾ ಹಾಕುವ ಸಮಯದಲ್ಲಿ ಶೇತ್ಕಿ ಜಮೀನು ಇತ್ತೋ ಅಥವಾ ಬಿನ್ ಶೇತ್ಕಿ ಇತ್ತೋ ಎಂದರೆ ಸಾಕ್ಷಿ ಶೇತ್ಕಿ ಇತ್ತು ಅನ್ನಿಸುತ್ತದೆ ಎನ್ನುತ್ತಾರೆ. ಸದರಿ ಆಸ್ತಿ ರಾಜೀಯಾಯಿತು ಎಂದು ಹೇಳಿದ್ದು ಯಾರ್ಯಾರಿಗೆ ಎಷ್ಟು ಅಳತೆ ವಿಸ್ತೀರ್ಣ ಬಂದಿತು ಎಂದರೆ ಸಾಕ್ಷಿ ನನ್ನ ತಾಯಿಗೆ 3 ಗುಂಟೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ನನ್ನ ತಾಯಿಯನ್ನು ಬಿಟ್ಟು ಅವರ ಅಣ್ಣತಮ್ಮಂದಿರಿಗೆ ಮತ್ತು ಅವರ ತಂದೆಗೆ ಎಷ್ಟು ಎಷ್ಟು ಹೋಯಿತು ಎಂದು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ದಾವಾ ನಂ.309/1988 ರಲ್ಲಿ ಹೇಳಿರುವ 197 ಸರ್ವೆ ನಂಬರ ಬಿಟ್ಟು ಉಳಿದ ಯಾವ ಆಸ್ತಿ ನಿಮ್ಮ ಅಜ್ಜನವರ ಹೆಸರಿನಲ್ಲಿದ್ದವು ಎಂದರೆ ಸಾಕ್ಷಿ ಹುಬ್ಬಳ್ಳಿ ತಾಲೂಕಿನ ಉಣಕಲ್ ಗ್ರಾಮದಲ್ಲಿ ಇರುವ ಸರ್ವೆ ನಂ.750/1 ರಲ್ಲಿ 1 ಎಕರೆ 28 ಗುಂಟೆ, ಗೋನಾಳ ಗ್ರಾಮದ ಸರ್ವೆ ನಂ.176/1 ರಲ್ಲಿ 4 ಎಕರೆ 20 ಗುಂಟೆ, 172/2 ರಲ್ಲಿ 2 ಎಕರೆ 10 ಗುಂಟೆ, 176/3 ರಲ್ಲಿ 10 ಎಕರೆ 20 ಗುಂಟೆ, ಹಾವೇರಿ ಜಿಲ್ಲಾ ಸವಣೂರು ತಾಲೂಕಿನ ಹೂವಿನಶಿಗ್ಲಿ ಗ್ರಾಮದಲ್ಲಿ ಸಾಕಷ್ಟು ಆಸ್ತಿಗಳಿದ್ದು ಅವುಗಳ ಸರ್ವೆ ನಂಬರ ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಸರ್ವೆ ನಂ.750/1 ರಲ್ಲಿ ಒಟ್ಟು ಕ್ಷೇತ್ರ ಎಷ್ಟಿತ್ತು ಎಂದರೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಯಾವುದಾದರೂ ದಾಖಲೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಹೂಂ ಎನ್ನುತ್ತಾರೆ. ಸಾಕ್ಷಿಗೆ

ತಾವು ನಿಶಾನೆಯಾಗಿ ಗುರುತಿಸಿಕೊಂಡಿರುವ ದಾಖಲೆಗಳನ್ನು ತೋರಿಸಿ ಅದರಲ್ಲಿ ಆ ದಾಖಲೆ ಇದೆಯಾ ಎಂದರೆ ಸಾಕ್ಷಿ ಅವುಗಳಲ್ಲಿ ಸರ್ವೆ ನಂಬರ ನನಗೆ ಗುರುತು ಆಗುತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ.176/1, 176/2, 176/3 ಇವುಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ನಮ್ಮ ವಕೀಲರ ಕಡೆ ಕೊಟ್ಟಿದ್ದೇನೆ ಎಂದು ನುಡಿದಿದ್ದು ಈಗ ನೀವು ನೋಡಿದ ದಾಖಲೆಗಳಲ್ಲಿ ಅವುಗಳು ಇದ್ದಾವಾ ಎಂದರೆ ಸಾಕ್ಷಿ ಕಾಣಲಿಲ್ಲ ಎನ್ನುತ್ತಾರೆ. ನಾನು ಹೇಳಿದಂತೆ ಸದರಿ ಸರ್ವೆ ನಂ.176/1, 176/2, 176/3 ಇವುಗಳು ಪಿತ್ರಾರ್ಜಿತ ಆಸ್ತಿಗಳು ಅಲ್ಲ ಎಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿಗಳೇ ಎನ್ನುತ್ತಾರೆ.

**(ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**